## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಶ್ರೀಮತಿ ಎಸ್.ಅಂಬಿಕಾ, ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.**

**ಓದಲಾಗಿದೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಚಿತ್ರದುರ್ಗ ಇವರ ಪತ್ರ ಸಂಖ್ಯೆ:ಜಿಪಂ/ಆ(3)/ಸಿಸಿಎ/ಸಿಆರ್-24/2017-18, ದಿನಾಂಕ:25.05.2017.
2) ಶ್ರೀಮತಿ ಎಸ್.ಅಂಬಿಕಾ, ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ಲಿಖಿತ ಹೇಳಿಕೆ ದಿನಾಂಕ:21.07.2017 ಮತ್ತು 23.10.2017.
3) ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 708 ಗ್ರಾಪಂಅ 2017 ದಿನಾಂಕ:07.11.2018
4) ರಿಟ್ ಅರ್ಜಿ ಸಂಖ್ಯೆ:44480/2017 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶ ದಿನಾಂಕ:23.10.2018.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಚಿತ್ರದುರ್ಗ ಇವರ ಅ.ಸ.ಪತ್ರ ಸಂಖ್ಯೆ:ಜಿಪಂ/ಆ(3)/ಸಿಸಿಎ/ಸಿಆರ್-24/2017-18, ದಿನಾಂಕ:27.06.2019

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ಪ್ರಸ್ತಾವನೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಚಿತ್ರದುರ್ಗ ಇವರು ಬುರುಜನರೊಪ್ಪ ಗ್ರಾಮ ಪಂಚಾಯಿತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯ 2014-15ರಿಂದ 2016-17ನೇ ಸಾಲಿನವರೆಗಿನ ವಿಶೇಷ ಲೆಕ್ಕ ತಪಾಸಣ ವರದಿಯಲ್ಲಿ ಆಕ್ಷೇಪಣಾ ಮೊತ್ತ ರೂ.26,62,457/- ಮತ್ತು ವಸೂಲಾತಿ ಮೊತ್ತ ರೂ.2,45,296/- ಹಾಗೂ ಇತರೆ ಹಲವು ನ್ಯೂನ್ಯತೆಗಳ ಕುರಿತು ಈ ಕೆಳಕಂಡಂತೆ ವರದಿ ಸಲ್ಲಿಸಿರುತ್ತಾರೆ.

- ಬಿ.ಆರ್.ಜಿ.ಎಫ್ ಯೋಜನೆ 2016-17 ನೇ ಸಾಲಿಗೆ ರೂ 2,03,657/-ಗಳನ್ನು ಕಾರ್ಯಪಾಲ ಇಂಜಿನಿಯರ್, ಪಂ.ರಾ.ಇಂ.ವಿ ಚಿತ್ರದುರ್ಗ ಇವರಿಗೆ ನೀಡಿದ್ದು, ವೆಚ್ಚ ಭರಿಸಿದ ಬಗ್ಗೆ ಅನುಷ್ಠಾನಾಧಿಕಾರಿಗಳಿಂದ ಹಣ ಬಳಕೆ ಪ್ರಮಾಣ ಪತ್ರವನ್ನು ಪಡೆಯದೆ ಇರುವುದರಿಂದ ಮತ್ತು ವೆಚ್ಚ ಭರಿಸಿದ ಬಗ್ಗೆ ದಾಖಲಾತಿಗಳನ್ನು ವಿಶೇಷ ಲೆಕ್ಕ ತನಿಖೆಗೆ ಹಾಜರು ಪಡಿಸದೆ ಇರುವುದು ಮೊತ್ತ ರೂ. 2,03,657/-
- 13ನೇ ಹಣಕಾಸು ಯೊಜನೆಯಲ್ಲಿ ಸುಟ್ಟು ಹೋದ ನೀರಿನ ಮೋಟಾರ್ ಮತ್ತು ಪಂಪ್ ಗಳ ದುರಸ್ಥಿ ಹಣದ ಧನಾದೇಶವನ್ನು ಸಂಸ್ಥೆಯ ಹೆಸರಿಗೆ ನೀಡದೆ ರೂ 18,650/- ಗಳನ್ನು ಶ್ರೀ ವಿ.ಎಸ್.ರುದ್ರಪ್ಪ ಹೆಸರಿಗೆ ನಿಡಿರುವುದು. ಅದಾಯ ತೆರಿಗೆ ಮೊತ್ತ ರೂ 6,106/- ಕಟಾಯಿಸದೆ ಇರುವುದು.

- 13ನೇ ಹಣಕಾಸು ಯೋಜನೆಯಲ್ಲಿ ರೂ 1,20,389/-ಗಳನ್ನು ವೆಚ್ಚ ಭರಿಸಿದ ಮೊತ್ತಕ್ಕೆ ಆದಾಯ ತೆರಿಗೆಯನ್ನು ಕಟಾಯಿಸದೆ ಇರುವುದು. ಕಾಮಗಾರಿ ವಹಿ ನಿರ್ವಹಿಸದೆ ಇರುವುದು, ದಾಸ್ತಾನು ಹಾಗೂ ವಿತರಣೆ ವಹಿಯನ್ನು ನಿರ್ವಹಿಸದೇ ಇರುವುದು.
- 14ನೇ ಹಣಕಾಸು ಯೋಜನೆ ಅಡಿಯಲ್ಲಿ 2016-17 ಸಾಲಿಗೆ ರೂ 22,27,731/- ವೆಚ್ಚ ಭರಿಸಿದ್ದು, ಕೊಟೇಶನ್, ಟೆಂಡರ್ ಕರೆದಿರುವುದಿಲ್ಲ. ಆದಾಯ ತೆರಿಗೆ ರೂ 15,695 ಕಟಾಯಿಸಿರುವುದಿಲ್ಲ.
- ಶ್ರೀ ಜಿ ಎ ವೀರಣ್ಣ ಅಂದಿನ ಪಿ.ಡಿ.ಓ. ಇವರು ದಿನಂಕ:10.02.2017 ರಂದು ಅಮಾನತ್ತುಗೊಂಡಿದ್ದರೂ ಸಹ ದಿನಾಂಕ:13.02.2017 ರಂದು ರೂ.2,08,372/-ಗಳನ್ನು 07 ಧನಾದೇಶಗಳ ಮೂಲಕ ಡ್ರಾ ಮಡಿರುವುದು ನಿಯಮಬಾಹಿರ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ವಿಶೇಷ ಲೆಕ್ಕ ತಪಾಸಣಾ ವರದಿಯಲ್ಲಿ ವಿವರಿಸಿರುವಂತೆ, ಶ್ರೀಮತಿ ಎಸ್ ಅಂಬಿಕಾ, ಆದ್ಯಕ್ಷರು, ಇವರೂ ಸಹ ಸದರಿ ಅಕ್ರಮಗಳಲ್ಲಿ ಸಮಭಾಗಿಯಾಗಿರುವ ಮೇರೆಗೆ ಸದರಿ ಶ್ರೀಮತಿ ಎಸ್ ಅಂಬಿಕಾ, ಆದ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 43(ಎ) ರಡಿಯಲ್ಲಿ ಸೂಕ್ತ ಕ್ರಮ ಜರುಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿತ್ರದುರ್ಗ ಜಿಲ್ಲೆ ರವರು ಸರ್ಕಾರವನ್ನು ಕೋರಿರುತ್ತಾರೆ.

ಅದರಂತೆ, ಮೇಲೆ ಓದಲಾದ ಕ್ರಮಾಂಕ (3)ರ ಸರ್ಕಾರಿ ಆದೇಶದಲ್ಲಿ ಶ್ರೀಮತಿ ಎಸ್ ಅಂಬಿಕಾ, ಆದ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ ಇವರ ಕರ್ತವ್ಯ ನಿರ್ಲಕ್ಷತೆ ಹಾಗೂ ದುರ್ನಡತೆ ಸಾಬೀತಾಗಿರುವುದರಿಂದ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 43(ಎ) ಮತ್ತು 48(4)ರನ್ವಯ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದುಹಾಕಿ ಆದೇಶಿಸಲಾಗಿರುತ್ತದೆ.

ಸರ್ಕಾರದ ಆದೇಶದ ವಿರುದ್ಧ ಸದರಿ ಅಧ್ಯಕ್ಷರು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಮೇಲೆ ಓದಲಾದ ಕ್ರಮಾಂಕ (5)ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 50690/2018 ರ ದಿನಾಂಕ: 22.11.2018 ರ ಆದೇಶದಲ್ಲಿ " The matter relates to challenge to the order at whereby the petitioner has been removed from the post of 'Adhyaksha' of the 'Grama Panchayath' pursuant to proceedings under Sections 43(A) and 48(4) of the Karnataka Gram Swaraj and Panchayth Act, 1993. Various contentions have been raised as regards the legality of the interim order, which require consideration. The petitioner apprehends that proceedings may be initiated to fill up the post of 'Adhyaksha', rendering the writ petition infructuous. Pending further consideration, status quo as date to be maintained."

ಮೇಲೆ ಓದಲಾದ ಕ್ರಮ ಸಂಖ್ಯೆ (5)ರಲ್ಲಿ ಶ್ರೀಮತಿ ಎಸ್ ಅಂಬಿಕಾ, ಆದ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಇವರು ಮಾಡಿರುವ ವಿವಿಧ ಯೋಜನೆಗಳಲ್ಲಿ ಕೆ.ಟಿ.ಟಿ.ಪಿ ಕಾಯ್ದೆ, ಅನುದಾನ ದುರ್ಬಳಕೆ, ಮಾರ್ಗಸೂಚಿಗಳ ಉಲ್ಲಂಘನೆ, ನಿಯಮಬಾಹಿರವಾಗಿ ಹಾಗೂ ಮೇಲಾಧಿಕಾರಿಗಳ ಆದೇಶ ಮತ್ತು ಗ್ರಾ.ಪಂ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯದೇ, 14ನೇ ಹಣಕಾಸು ಯೋಜನೆಯಡಿಯಲ್ಲಿ ರೂ.2,08,372/-ಗಳ ಅನುದಾನ ಡ್ರಾ ಮಾಡಿರುವುದು ಸೇರಿದಂತೆ, ಎಲ್ಲಾ ಅವ್ಯವಹಾರಗಳಲ್ಲಿ ಸಮಭಾಗಿಯಾಗಿರುವುದರಿಂದ

ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 43(ಎ) ರಡಿಯಲ್ಲಿ ಸೂಕ್ತ ಕ್ರಮ ಜರುಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿತ್ರದುರ್ಗ ಜಿಲ್ಲೆ ರವರು ಸರ್ಕಾರವನ್ನು ಕೋರಿರುತ್ತಾರೆ.

ಸದರಿ ಪ್ರಕರಣದ ವಿಚಾರಣೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅರೆನ್ಯಾಯಿಕ ನ್ಯಾಯಾಲಯದಲ್ಲಿ ನಡೆಸಲು ತೀರ್ಮಾನಿಸಿ, ಅದರಂತೆ ವಿಚಾರಣಾ ಹಾಜರಾತಿ ತಿಳುವಳಿಕೆ ಪತ್ರ ದಿನಾಂಕ:06.07.2019, 04.09.2019 ಮತ್ತು 18.09.2019 ಗಳಂದು ವಿಚಾರಣೆಗೆ ತೆಗೆದುಕೊಂಡು, ವಿಚಾರಣೆ ನಡೆಸಲಾಗಿರುತ್ತದೆ.

ಈ ಪ್ರಕರಣದ ವಿಚಾರಣೆ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಶ್ರೀಮತಿ ಎಸ್ ಅಂಬಿಕಾ, ಹಿಂದಿನ ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ಆಪಾದನೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣದ 43(ಎ) ರನ್ವಯ ಸದಸ್ಯತ್ವದಿಂದ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 708 ಗ್ರಾಪಂಅ 2017 ಬೆಂಗಳೂರು, ದಿನಾಂಕ: 18.01.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಎಸ್ ಅಂಬಿಕಾ, ಹಿಂದಿನ ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ವಿವಿಧ ಅಭಿವೃದ್ಧಿ ಯೋಜನೆ / ಕಾರ್ಯಕ್ರಮಗಳ ಮಾರ್ಗಸೂಚಿಗಳನ್ನು ನಿಯಮಬಾಹಿರ ಮಾಡಿರುವುದು, ಕೆ.ಟಿ.ಟಿ.ಪಿ ಕಾಯ್ದೆಯ ಉಲ್ಲಂಘನೆ, ಅನುದಾನ ದುರ್ಬಳಕೆ ಹಾಗೂ ಮೇಲಾಧಿಕಾರಿಗಳ ಆದೇಶವಿಲ್ಲದೇ ಮತ್ತು ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯದೇ, 14ನೇ ಹಣಕಾಸು ಯೋಜನೆಯಡಿಯಲ್ಲಿ ರೂ.2,08,372/-ಗಳ ಅನುದಾನ ಡ್ರಾ ಮಾಡಿರುವುದು ಸೇರಿದಂತೆ, ಎಲ್ಲಾ ಅವ್ಯವಹಾರಗಳ ಆಪಾದನೆ ಸಾಬೀತಾಗಿರುತ್ತದೆ. ಆದುದರಿಂದ ಶ್ರೀಮತಿ ಎಸ್ ಅಂಬಿಕಾ, ಹಿಂದಿನ ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 43(ಎ) ರನ್ವಯ ಬುರುಜನರೊಪ್ಪ ಗ್ರಾಮ ಪಂಚಾಯತಿಯ ಸದಸ್ಯತ್ವದಿಂದ ತಕ್ಷಣದಿಂದ ಜಾರಿಗೆ ಬರುವಂತೆ, ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 18/01/2020.
(ನವೀನ್ ಕುಮಾರ್. ಬಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಪ್ರತಿ:</u>

1) ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ ಜಿಲ್ಲೆ.

3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹಿರಿಯೂರು, ಚಿತ್ರದುರ್ಗ ಜಿಲ್ಲೆ.
4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
5) ಶ್ರೀಮತಿ ಎಸ್ ಅಂಬಿಕಾ, ಹಿಂದಿನ ಅದ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ **(ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹಿರಿಯೂರು, ಚಿತ್ರದುರ್ಗ ಜಿಲ್ಲೆ ಇವರ ಮುಖಾಂತರ)**

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಗಣಕ ಕೋಶ.
4. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.